# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.293-2014** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಸಿ.ವಿ.ಸುಬ್ರಮಣ್ಯಂ<br>ಬೆಂಗಳೂರು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 16-03-2023. |

**ಪಾಟೀ ಸವಾಲುಃ ಶ್ರೀ ಎಂ.ಎಂ ವಕೀಲರಿಂದಃ**

ವಾದಿ ನನ್ನ ಸ್ನೇಹಿತರು ಮತ್ತು ನಾನು ಅವರು ಒಂದೇ ಕಡೆ ಕೆಲಸ ಮಾಡುತ್ತಿದ್ದೆವು. ನನಗೆ ಈ ದಾವೆಗೆ ಸಂಬಂಧಿಸಿದ ವಿಚಾರ ತಿಳಿದಿರುತ್ತದೆ. ವಾದಿರವರು ಆರೋಗ್ಯವಾಗಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ 80 ವರ್ಷ ವಯಸ್ಸಾಗಿದ್ದು ಓಡಾಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳನ್ನು ನಾನು ಸ್ವತಃ ನೋಡಿ ತಿಳಿದುಕೊಂಡಿರುತ್ತೇನೆ. 3 ನೇ ಪ್ರತಿವಾದಿ ಕಲ್ಲಹಳ್ಳಿಯ ವಾಸಿ. ದಾವಾದ ಶೀರ್ಷಿಕೆಯಲ್ಲಿರುವ ವಿಳಾಸವನ್ನು ನೋಡಿರುತ್ತೇನೆ. ವಾದಿ ದಾವಾ ಷೆಡ್ಯೂಲ್ ಸ್ವತನ್ನು ದಿ.30-01-1992 ರಲ್ಲಿ ಕೆಂಚಯ್ಯ ರವರಿಂದ ಖರೀದಿ ಮಾಡಿರುತ್ತಾರೆ. ಕ್ರಯ ಪತ್ರವಾದ ಸಮಯದಲ್ಲಿ ನಾನು ಹಾಜರಿದ್ದು ಕ್ರಯ ಪತ್ರಕ್ಕೆ ಸಾಕ್ಷಿದಾರರನಾಗಿ ಸಹಿ ಮಾಡಿರುತ್ತೇನೆ. ಸದರಿ ಕ್ರಯ ಪತ್ರವನ್ನು ಕೆಂಚಯ್ಯ ಮತ್ತು ನಾಗರಾಜು ರವರು ಬರೆದುಕೊಟ್ಟಿರುತ್ತಾರೆ. ವಾದಿಯವರು ಕ್ರಯಕ್ಕೆ ಪಡೆದ ಸ್ವತ್ತು ಖಾಲಿ ನಿವೇಶನವಾಗಿರುತ್ತದೆ ಸ್ವತ್ತನ್ನು ಖರೀದಿ ಮಾಡಿದ ನಂತರ ನಾನಾಗಲಿ ವಾದಿಯಾಗಲಿ ದಾವಾ ಷೆಡ್ಯೂಲ್ ಸ್ವತನ್ನು ಅಳತೆ ಮಾಡಿಸಿರುವುದಿಲ್ಲ. ನಾನು ಸಾಮಾನ್ಯ ಅಧಿಕಾರ ಪತ್ರವನ್ನು ಪಡೆದ ನಂತರ ದಾವಾ ಸ್ವತನ್ನು ಅಳತೆ ಮಾಡಿಸಲು ನನಗೆ ತೊಂದರೆ ಇರಲಿಲ್ಲ.

2. ನನಗೆ 1 ನೇ ಪ್ರತಿವಾದಿ ಗೊತ್ತು ಅವರ ಹೆಸರು ಹುಚ್ಚಯ್ಯ. ಅವರ ಪತ್ನಿ ಮಹದೇವಮ್ಮ ನನಗೆ ಗೊತ್ತಿಲ್ಲ. ನಾಗರಾಜು ರವರು ಮಹದೇವಮ್ಮನವರಿಗೆ ಒಂದು ಸ್ವತ್ತನ್ನು ಕ್ರಯ ಮಾಡಿ ಅವರ ಸ್ವಾಧೀನಕ್ಕೆ ಬಿಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ಅವರು ಮನೆ ಕಟ್ಟಿಕೊಂಡಿದ್ದಾರೆ

ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಒತ್ತುವರಿ ಮಾಡಿರುವ ವಿಚಾರ ಗೊತ್ತು ಎಂದು ನುಡಿಯುತ್ತಾರೆ. ಸುಮಾರು ಮುಕ್ಕಾಲು ಗುಂಟೆ ಸ್ವತನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿರುತ್ತಾರೆ. ಸದರಿ ಮನೆಯೂ ಶೀಟಿನ ಮನೆ ಎಂದರೆ ನನಗೆ ಗೊತ್ತಿಲ್ಲ. ಮಹದೇವಮ್ಮ ರವರು ಕಟ್ಟಿದ ಮನೆಯನ್ನು ನಾಗರಾಜು ಮತ್ತು ಅವರ ಕುಟುಂಬದವರಿಂದ ನೋಂದಾಯಿತವಲ್ಲದ ಕ್ರಯ ಪತ್ರದ ಮುಖೇನ ಕ್ರಯಕ್ಕೆ ಪಡೆದು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರು ಮನೆಯನ್ನು ಕ್ರಯಕ್ಕೆ ಪಡೆದಿರುವುದಿಲ್ಲ ನಂತರ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸ್ಥಳಕ್ಕೆ ಹೋಗದೇ ಇರುವುದರಿಂದ ಸ್ಥಳದಲ್ಲಿನ ವಾಸ್ತವಾಂಶ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ದಿ.01-04-2014 ರಂದು 1 ನೇ ಪ್ರತಿವಾದಿ ಪತ್ನಿ ಮಹದೇವಮ್ಮ ರವರು ಸರ್ವೆ ನಂ.196/1 ಎ ರಲ್ಲಿ ಒಂದು ಗುಂಟೆ ಸ್ವತ್ತು ಹಾಗೂ ಸರ್ವೆ ನಂ.196/1 ಎ 1 ರಲ್ಲಿ ಪೂರ್ವ-ಪಶ್ಚಿಮ.35 ಅಡಿಗಳು, ಉತ್ತರ-ದಕ್ಷಿಣ.31 ಅಡಿಗಳ ಸ್ವತ್ತನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ ಆದರೆ ಅವರು ಸರ್ವೇ ನಂ.196/1 ಎಫ್ ನಲ್ಲಿ ಒತ್ತುವರಿ ಮಾಡಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಪತ್ನಿ ಮಹದೇವಮ್ಮ ಅವರು ಕ್ರಯಕ್ಕೆ ಪಡೆದ ಸ್ವತ್ತಿನಲ್ಲೇ ಸ್ವಾಧೀನಲ್ಲಿ ಇರುತ್ತಾರೆ, ನಾನು ಹೇಳುವಂತೆ ಯಾವುದೇ ಸ್ವತನ್ನು ಒತ್ತುವರಿ ಮಾಡಿಕೊಂಡಿರುವುದಿಲ್ಲ ನಾನು ಸ್ವತ್ತಿನ ಅಳತೆ ಮಾಡಿಸದೇ ಇರುವುದರಿಂದ ಸ್ವತನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಿರುತ್ತೇನೆ ಎಂದರೆ ಸರಿಯಲ್ಲ.

3. ದಾವಾ ಷೆಡ್ಯೂಲ್ ಸ್ವತ್ತು ಮತ್ತು ಪ್ರತಿವಾದಿಗಳ ಸ್ವತ್ತು ಈಗ ನಗರಸಭಾ ವ್ಯಾಪ್ತಿಯಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೂ 1 ನೇ ಪ್ರತಿವಾದಿಯ ಪತ್ನಿ ಕ್ರಯಕ್ಕೆ ಪಡೆದ ಸ್ವತ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ನೀಡದೇ ಇದ್ದರೂ 1 ನೇ ಪ್ರತಿವಾದಿ ಪತ್ನಿ ಕ್ರಯಕ್ಕೆ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು ವಾದಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತನ್ನು ಕಣ್ಣಾರೆ ನೋಡಿರುವುದಿಲ್ಲ ಹಾಗೂ ಈ ದಾವೆಯ ವಿಚಾರ ಗೊತ್ತಿಲ್ಲದೇ ಇದ್ದರೂ ವಾದಿಗೆ ಸಹಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಷೆಡ್ಯೂಲ್ ಸ್ವತ್ತನ್ನು ನೋಡಿ ಒಂದು ವರ್ಷವಾಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿಯನ್ನು ಹೇಳಬಲ್ಲೆ ಪೂರ್ವಕ್ಕೆ-

ರಸ್ತೆ, ಪಶ್ಚಿಮಕ್ಕೆ–ಕೆಂಚಯ್ಯನವರ ಜಮೀನು, ಉತ್ತಕ್ಕೆ–ವಾದಿಗೆ ಸೇರಿದ ಜಮೀನು ಹಾಗೂ ದಕ್ಷಿಣಕ್ಕೆ–ಮೊದಲಿಗೆ ಕೆಂಚಯ್ಯನವರ ಸ್ವತ್ತು ಇದ್ದು, ಈಗ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**